**<u>ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ</u>**

**<u>ಸಿ.ಸಿ ಸಂಖ್ಯೆ ::270/2022</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಲಕ್ಷ್ಮೀ ನಾರಾಯಣ ಹೆಚ್. ಎಸ್ | **PW**-06 |
| **ತಂದೆಯ ಹೆಸರು** | : | ಹೆಚ್.ಕೆ ಶ್ರೀನಿವಾಸ | **CW**- 17 |
| **ವಯಸ್ಸು** | : | 64 ವರ್ಷ | |
| **ಉದ್ಯೋಗ** | : | ನಿವೃತ್ತ ಎ.ಎಸ್. ಐ | |
| **ವಾಸಸ್ಥಳ** | : | ಶಕ್ತಿ ನಗರ, ಹರಿಹರಪುರ. | |

**ದಿನಾಂಕಃ07-03-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**<u>:: ಮುಖ್ಯ ವಿಚಾರಣೆ :: A.P.P ರವರಿಂದ ::</u>**

1. ನಾನು ಜನವರಿ 2017 ರಿಂದ ಸೆಪ್ಟೆಂಬರ್ 2018 ರ ವರೆವಿಗೂ ಶೃಂಗೇರಿ ಪೋಲೀಸ್ ಠಾಣೆಯಲ್ಲಿ, ಎ.ಎಸ್.ಐ., ಆಗಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ.

2. ದಿಃ 04-04-2018 ರಂದು ಠಾಣಾ ಮೊಕದ್ದಮೆ ಸಂಖ್ಯೆ 7/2018 ರ ಕಲಂ 380 ಐ.ಪಿ.ಸಿ ಪ್ರಕರಣದಲ್ಲಿ ಬಾಗಲಕೋಟೆ ನವ ನಗರ ಪೋಲೀಸ್ ಠಾಣೆಯಿಂದ ಬಾಡಿ ವಾರೆಂಟ್ ಅಡಿಯಲ್ಲಿ ಕರೆತಂದಿದ್ದ 1 ನೇ ಆರೋಪಿತರಾದ ವಾಸುದೇವ ಮತ್ತು 2 ನೇ ಆರೋಪಿತರಾದ ಪ್ರಕಾಶ ಇವರುಗಳನ್ನು ಕರೆದುಕೊಂಡು ಅವರ ಸ್ವಯಿಚ್ಛಾ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ. ಸದರಿ ಆರೋಪಿತರ ಹೇಳಿಕೆಯ ಮೇರೆಗೆ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ದಾಖಲು ಮಾಡಿಕೊಳ್ಳುವ ಸಲುವಾಗಿ ಪಂಚಸಾಕ್ಷಿದಾರರಾದ ಚಾಸಾ-5 ಮತ್ತು ಚಾಸಾ-6 ರವರನ್ನು ಬರ ಮಾಡಿಕೊಂಡು ಆರೋಪಿತರೊಂದಿಗೆ, ಆರೋಪಿತರು ತೋರಿಸಿದಂತೆ ಶೃಂಗೇರಿ ಪಟ್ಟಣದಲ್ಲಿರುವ ದುರ್ಗಾಂಬ ಪೆಟ್ರೋಲ್ ಬಂಕ್ ಎದುರುಗಡೆ ಇರುವ ಶುಭೋದಯ ಲಾಡ್ಜ್ ಬಳಿಗೆ ಹೋಗಿದ್ದು, 1 ನೇ ಆರೋಪಿತರು ಸದರಿ ಲಾಡ್ಜ್ ನ ರೂಮ್ ನಂ.208 ರ ಬಳಿಗೆ

ಕರೆದುಕೊಂಡು ಹೋಗಿದ್ದು, ಚಾಸಾ-4 ರವರ ಸಹಾಯದಿಂದ ಸದರಿ ಕೊಠಡಿಯ ಬಾಗಿಲನ್ನು ತೆರೆದು ನೋಡಲಾಗಿ 1 ನೇ ಆರೋಪಿತರು ತಾವು ಸದರಿ ಕೊಠಡಿಯಲ್ಲಿಯೇ ದಿಃ20-01-2018 ರಂದು ತಂಗಿದ್ದು, ಮರುದಿನ ಮದ್ಯಾಹ್ನ ಕೊಠಡಿಯನ್ನು ಖಾಲಿ ಮಾಡಿಕೊಂಡು ತಾವಾಗಿಯೇ ಹೋಗುವಾಗ ಸದರಿ ಕೊಠಡಿಯಲ್ಲಿ ಇರಿಸಿದ್ದ 24 ಇಂಚಿನ ಎಲ್.ಜಿ., ಎಲ್.ಇ.ಡಿ ಟಿವಿಯನ್ನು ಕಳುವು ಮಾಡಿಕೊಂಡಿ ಹೋಗಿರುವುದಾಗಿ ತಿಳಿಸಿರುತ್ತಾರೆ. ಸಾಕ್ಷಿಯು ಸದರಿ ಸ್ಥಳ ಮಹಜರ್ ಅನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ಮೂಲ ಸಿ.ಸಿ., ನಂ. 238/2018 ರಲ್ಲಿ ನಿಶಾನೆ ಪಿ-11 ಎಂದು ನಿಶಾನೆಗೊಂಡಿರುತ್ತದೆ. ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-11(ಸಿ) ಎಂದು ಗುರುತಿಸಲಾಯಿತು. ಸದರಿ ಮೂಲ ಸ್ಥಳ ಮಹಜರ್ ನ ಧೃಡೀಕೃತ ಪ್ರತಿಯನ್ನು ಈ ಪ್ರಕರಣದಲ್ಲಿ ಸಲ್ಲಿಸಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ನಿಶಾನೆಗೊಂಡಿರುತ್ತದೆ. ಸದರಿ ಸ್ಥಳ ಪಂಚನಾಮೆಯನ್ನು ಮದ್ಯಾಹ್ನ 1.00 ಗಂಟೆ ಯಿಂದ 1.30 ರ ವರೆಗೂ ಸ್ಥಳದಲ್ಲಿಯೇ ದಾಖಲು ಮಾಡಿರುತ್ತೇನೆ.

3. ನಂತರ ಸದರಿ ಆರೋಪಿತರನ್ನು ನಾವು ನ್ಯಾಯಾಲಯಕ್ಕೆ ಹಾಜರು ಪಡಿಸಿ ತದನಂತರ ಅವರನ್ನು ಮೂಲ ನ್ಯಾಯಾಂಗ ಬಂಧನದಲ್ಲಿದ್ದ ಪ್ರಕರಣದಲ್ಲಿ ನ್ಯಾಯಾಲಯದ ಆದೇಶದನ್ವಯ ಹಿಂದಿರುಗಿ ಕಳುಹಿಸಿರುತ್ತೇವೆ. ದಿಃ08-04-2018 ರಂದು ನಮ್ಮ ಪೋಲೀಸ್ ಠಾಣೆಯ ಹೆಚ್.ಸಿ-69 ಮುರುಳೀಧರ ರವರು ನನ್ನ ಮುಂದೆ ಹಾಜರು ಪಡಿಸಿದ 24 ಇಂಚಿನ ಎಲ್.ಜಿ., ಎಲ್.ಇ.ಡಿ ಟಿವಿಯನ್ನು ಚಾಸಾ-6 ಮತ್ತು ಚಾಸಾ-7 ರವರ ಸಮಕ್ಷಮ ಜಪ್ತಿ ಮಾಡಿಕೊಂಡಿದ್ದು, ಆ ಸಂದರ್ಭದಲ್ಲಿ ಸದರಿ ಟಿ.ವಿ., ಕಳ್ಳತನ ವಾಗಿತ್ತು ಎಂದು ಚಾಸಾ-4 ರವರು ಠಾಣೆಯಲ್ಲಿ ಹಾಜರಾಗಿ ಗುರುತಿಸಿರುತ್ತಾರೆ.

4. ಸಾಕ್ಷಿಯು ಸ್ವತ್ತು ಅಮಾನತು ಪಂಚನಾಮೆಯನ್ನು ಅನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ಮೂಲ ಸಿ.ಸಿ., ನಂ.238/2018 ರಲ್ಲಿ ನಿಶಾನೆ ಪಿ-7 ಎಂದು ನಿಶಾನೆಗೊಂಡಿರುತ್ತದೆ. ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು,

ಅದನ್ನು ನಿಪಿ-7(ಡಿ) ಎಂದು ಗುರುತಿಸಲಾಯಿತು. ಸದರಿ ಅಮಾನತು ಪಂಚನಾಮೆಯ ಧೃಡೀಕೃತ ಪ್ರತಿಯನ್ನು ಈ ಪ್ರಕರಣದಲ್ಲಿ ಸಲ್ಲಿಸಿದ್ದು ಅದನ್ನು ಈಗಾಗಲೇ ನಿಪಿ-4 ಎಂದು ನಿಶಾನೆಗೊಂಡಿರುತ್ತದೆ. ಸದರಿ ಅಮಾನತು ಪಂಚನಾಮೆಯನ್ನು ಬೆಳಗ್ಗೆ 9.00 ಗಂಟೆ ಯಿಂದ 9.30 ರ ವರೆಗೂ ದಾಖಲು ಮಾಡಿರುತ್ತೇನೆ. ತನಿಖೆ ಪೂರ್ಣವಾದ ಕಾರಣ ಅಂತಿಮ ವರದಿಯನ್ನು ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಈಗ ಸಾಕ್ಷಿಯು 1 ನೇ ಆರೋಪಿತರ ಸ್ವಯಿಚ್ಚಾ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಸದರಿ ಹೇಳಿಕೆಯ ಭಾಗಾಂಶವನ್ನು ನಿಪಿ-5 ಎಂದು ಗುರುತಿಸಲಾಯಿತು.

**:: ಪಾಟೀ ಸವಾಲು :: ಆರೋಪಿ ಪರ ಶ್ರೀ.K.C.C ವಕೀಲರಿಂದ ::**

ಪ್ರಕರಣದಲ್ಲಿ ಕಳುವಾಗಿದೆ ಎಂದು ಹೇಳಲಾದ ಟಿ.ವಿ.,ಯ ಮಾಲೀಕತ್ವಕ್ಕೆ ಸಂಬಂಧಿಸಿದ ಯಾವುದೇ ದಾಖಲೆಯನ್ನು ನಾನು ಪಡೆದುಕೊಂಡಿರುವುದಿಲ್ಲ. ಚಾಸಾ-4 ಮತ್ತು ಚಾಸಾ-5 ರವರು ಚಾಸಾ-1 ರವರ ಮಾಲೀಕತ್ವದ ಲಾಡ್ಜ್ ಮತ್ತು ಬಾರ್ ನಲ್ಲಿ ಕೆಲಸ ಮಾಡುತ್ತಾರೆ ಮತ್ತು ಚಾಸಾ-1 ರವರಿಗೆ ಪರಿಚಯಸ್ಥರಾಗಿರುತ್ತಾರೆ ಎಂದರೆ ಸರಿ. ಶುಭೋದಯ ಲಾಡ್ಜ್ ಎದುರುಗಡೆ ಪೆಟ್ರೋಲ್ ಬಂಕ್ ಇದ್ದು, ಅದು ಸಾರ್ವಜನಿಕ ಸ್ಥಳವಾಗಿರುತ್ತದೆ ಎಂದರೆ ಸರಿ. ನಾನು ಪ್ರಕರಣದಲ್ಲಿ ಸ್ವತಂತ್ರ ಪಂಚ ಸಾಕ್ಷಿದಾರರನ್ನು ಉದ್ದೇಶ ಪೂರ್ವಕವಾಗಿ ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸ್ಥಳ ಮಹಜರ್ ಮಾಡಿದ ಕೊಠಡಿಯ ಭಾವ ಚಿತ್ರಗಳನ್ನು ತೆಗೆದುಕೊಂಡಿರುತ್ತೇನೆ. ಸದರಿ ಭಾವ ಚಿತ್ರಗಳನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುವುದಿಲ್ಲ ಎಂದರೆ ನನಗೆ ನೆನಪಿಲ್ಲ.

2. ನಾನು ಸ್ಥಳ ಮಹಜರ್ ಮಾಡುವ ಕಾಲಕ್ಕೆ ಸದರಿ ಕೊಠಡಿಯಲ್ಲಿ ಟಿ.ವಿ., ಇರಲಿಲ್ಲ. ಆರೋಪಿತರನ್ನು ಬಾಡಿ ವಾರೆಂಟ್ ಮುಖಾಂತರ ಪ್ರಕರಣದ ತನಿಖೆಗಾಗಿ ನ್ಯಾಯಾಲಯದ ಆದೇಶದ ಅನ್ವಯ ಕರೆದುಕೊಂಡು ಬಂದಿದ್ದ ಸಂದರ್ಭದಲ್ಲಿ ಕಳುವಾಗಿದ್ದ ಟಿ.ವಿ., ಯನ್ನು ತಂದಿರಲಿಲ್ಲ. ಅಮಾನತು ಪಡಿಸಿಕೊಂಡ ಎಲ್.ಜಿ ಕಂಪನಿಯ ಎಲ್.ಇ.ಡಿ ಟಿ.ವಿ.,ಯ ಬಾರ್ ಕೋಡ್ ಸ್ಕ್ಯಾನ್ ಅನ್ನು ನಾನು ಪರಿಶೀಲಿಸಿರುವುದಿಲ್ಲ. ನಾನು ಸದರಿ

ಟಿ.ವಿ.,ಯನ್ನು ಅಮಾನತು ಪಡಿಸಿಕೊಂಡ ಸಂದರ್ಭದಲ್ಲಿ ಯಾವುದೇ ಭಾವ ಚಿತ್ರವನ್ನು ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

3. ಚಾಸಾ-5 ಮತ್ತು ಚಾಸಾ-6 ರವರುಗಳು ಸಹ ಚಾಸಾ-1 ರವರ ಬಳಿ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-5 ಮತ್ತು ಚಾಸಾ-6 ರವರುಗಳು ಭಾರತೀಬೀದಿಯ ಸ್ಥಳೀಯ ನಿವಾಸಿಗಳಲ್ಲ ಎಂದರೆ ಸರಿ. ಆರೋಪಿಯ ಸ್ವಯಿಚ್ಛಾ ಹೇಳಿಕೆಯನ್ನು ನಾನು ದಾಖಲು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ಹೇಳಲಾದ ಕಳ್ಳತನವಾದ ಟಿ.ವಿ., ಗೂ ಆರೋಪಿಗೂ ಮತ್ತು ಅಮಾನತು ಪಡಿಸಿಕೊಂಡ ಕಳ್ಳತನವಾದ ಟಿ.ವಿ ಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ 1 ನೇ ಆರೋಪಿತರ ವಿರುದ್ಧ ಸುಳ್ಳು ಆರೋಪ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ::

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.